ಅಧ್ಯಕ್ಷರು.—ಮುಂದಿನ ಪ್ರಶ್ನೆ.....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಪ್ರತಿಯೊಂದಕ್ಕೂ ಹೀಗೆ ಮಾಡಿದರೆ ಹೇಗೆ? ಇದಕ್ಕೆ ಪರಿಹಾರ ಸಿಕ್ಕಬೇಕೆಂಬ ಉದ್ದೇಶದಿಂದಲೇ ಪ್ರಶ್ನೆಗಳನ್ನು ಹಾಕುವುದು. ಹೊರಗೆ ಪರಿಹಾರ ಸಿಕ್ಕುವುದಿಲ್ಲ. ಸದನದಲ್ಲೆ ಅದರ ಬಗ್ಗೆ ನ್ಯಾಯ ಸಿಕ್ಕಬೇಕೆಂಬ ಉದ್ದೇಶದಿಂದ ಪ್ರಶ್ನೆಗಳನ್ನು ಕೇಳುತ್ತಾರೆ.

MR. SPEAKER.—Hon. Member You cannot make such an allegation. We have spent 15 minutes on this question, Please resume your seat.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—This is too much. ಹೀಗಾದರೆ ಪ್ರಶ್ನೆ ಏಕೆ ಹಾಕಬೇಕು. ಇಲ್ಲಿ ಸುಮ್ಮನೆ ಇರಲು ಬರುವುದಾ ? ಇದಕ್ಕೇನಾದರೂ ಪರಿಹಾರ ಸಿಕ್ಕಬೇಕಲ್ಲ. ೫೦೦ ಮೈಲಿ ದೂರದಲ್ಲಿ ಇರುವ ಊರಿಗೆ ಎಂದು ನಿಗದಿ ಮಾಡಿದ್ದನ್ನು ಬೆಂಗಳೂರಿನ ಸುತ್ತ ಮುತ್ತ ಹಾಕಿದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ಪದ ಬಳಕೆಗೂ ಸ್ವಲ್ಪ ಇತಿ ಮಿತಿ ಇರಬೇಕಾಗುತ್ತದೆ. I have gone to the next question. I cannot go back. Nothing will go on record about this question. You can raise it in a different form, if atall you want to raise it. You send the notice. I will consider it.

ರಾಜ್ಯದಲ್ಲಿನ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗಳನ್ನು ಭರ್ತಿ ಮಾಡುವುದರ ಬಗ್ಗೆ

೪೦೫ (೧೪೩) ಶ್ರೀ ಆರ್. ಎನ್. ನಾಯಕ್ (ಭಟ್ಕಳ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗಳನ್ನು ಭರ್ತಿ ಮಾಡುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗುತ್ತಿದೆಯೇ ?

ಆ) ಸೀನಿಯರ್ ಎ.ಪಿ.ಪಿ.ಯಾಗಿ ಬಡ್ತಿ ನೀಡುವಾಗ ರೋಸ್ಟರ್ ಪದ್ಧತಿ ಅನುಸರಿಸಲಾಗುತ್ತಿದೆಯೇ ? ಹಾಗಿದ್ದಲ್ಲಿ ಬಿ.ಸಿ., ಬಿ.ಟಿ., ಎಸ್.ಸಿ., ಎಸ್.ಟಿ., ಬಿ.ಸಿ.ಎಮ್., ನವರಿಗೆ ಯಾವ ಪ್ರಮಾಣದಲ್ಲಿ ಹುದ್ದೆಗಳನ್ನು ಮೀಸಲಾಗಿಡಲಾಗಿದೆ?

ಇ) ಹಾಗಿಲ್ಲದಿದ್ದಲ್ಲಿ ರೋಸ್ಟರ್ ಪದ್ಧತಿಯನ್ನನುಸರಿಸುವ ವ್ಯವಸ್ಥೆಯನ್ನು ಮಾಡಲಾಗುವುದೇ.

ಈ) ಪಬ್ಲಿಕ್ ಪ್ರಾಸಿಕ್ಯೂಟರ್ ಬಡ್ತಿ ಮಾಡುವಾಗ ರೋಸ್ಟರ್ ಪದ್ಧತಿ ಅನುಸರಿಸಲಾಗುವುದೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು).—

ಅ) ಹೌದು.

ಆ) ಸರ್ಕಾರೀ ಆದೇಶ ಕ್ರಮ ಸಂಖ್ಯೆ ಡಿಪಿಎಆರ್ ೨೯ ಎಸ್‌ಬಿಸಿ ೭೭ ದಿನಾಂಕ ೧-೬-೧೯೭೮ ಮತ್ತು ಡಿಪಿಎಆರ್ ೨೨ ಎಸ್‌ಬಿಸಿ ೭೯ ದಿನಾಂಕ ೩೦-೮-೧೯೭೯ರಲ್ಲಿ ಹೊರಡಿಸಿರುವ ನಿಯಮಗಳಿಗನುಸಾರವಾಗಿ ಈ ಹುದ್ದೆಗಳಿಗೆ ಬಡ್ತಿ ಮಾಡಲಾಗುತ್ತಿದೆ. ರೋಸ್ಟರ್ ಪದ್ಧತಿಯು ಎಸ್.ಸಿ. ಮತ್ತು ಎಸ್.ಟಿ.ಗಳಿಗೆ ಮಾತ್ರ ಅನ್ವಯಿಸುತ್ತದೆ.

ಇ) ಉದ್ಭವಿಸುವುದಿಲ್ಲ.

ಈ) ಈ ಹುದ್ದೆಗಳಿಗೆ ರೋಸ್ಟರ್ ಪದ್ಧತಿ ಅನ್ವಯಿಸುವುದಿಲ್ಲ.

ಶ್ರೀ ಆರ್. ಎನ್. ನಾಯಕ್.—ಸೀನಿಯರ್ ಎ.ಪಿ.ಪಿ.ಗೆ ಬಡ್ತಿಯನ್ನು ಕೊಡುವಾಗ ಮಾನ್ಯ ಮಂತ್ರಿಗಳು ವಿವಿಧ ನಿಯಮದ ಪ್ರಕಾರ ಎಸ್.ಸಿ., ಎಸ್.ಟಿ. ಯವರಿಗೆ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗಿದೆ ಎಂಬುದಾಗಿ ಹೇಳಿದ್ದಾರೆ ಬಿ.ಸಿ.ಎಂ. ನವರಿಗೂ ಕೂಡ ಇರತಕ್ಕಂತಹ ನಿಯಮಗಳನ್ನು ಬದಲಾವಣೆ ಮಾಡಿ, ಅವರಿಗೂ ಸಹ ರೋಸ್ಟರ್ ಪದ್ಧತಿಯನ್ನು ಜಾರಿಗೆ ತಂದು ಸೀನಿಯರ್ ಎ.ಪಿ.ಪಿ.ಗೆ ಬಡ್ತಿ ಕೊಡುವಾಗ ಆಳವಡಿಸುವಂತಹ ಆಲೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಸದ್ಯಕ್ಕೆ ಆ ಯೋಚನೆ ಸರ್ಕಾರದ ಮುಂದೆ ಇಲ್ಲ.

ಸೇಡಂ ಕ್ಷೇತ್ರದಲ್ಲಿ ಜನತಾ ಗೃಹಗಳ ನಿರ್ಮಾಣ

೪೦೬ (೧೬೯) ಶ್ರೀ ನಾಗರೆಡ್ಡಿ ಲಚಮಾ ರೆಡ್ಡಿ ಪಾಟೀಲ್ (ಸೇಡಂ).—ಈ ಕಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ :—

ಅ) ಸೇಡಂ ಕ್ಷೇತ್ರದಲ್ಲಿ ಸೇಡಂ ತಾಲ್ಲೂಕು ಮತ್ತು ಚಿತ್ತಾಪುರ ತಾಲ್ಲೂಕುಗಳ ಹನ್ನೊಂದು ಗ್ರಾಮಗಳಲ್ಲಿ ಬಡವರಿಗಾಗಿ ಜನತಾ ಮತ್ತು ಹುಡ್ಕೋ ಯೋಜನೆಗಳಲ್ಲಿ ಕಟ್ಟಿರುವ ಮನೆಗಳ ಸಂಖ್ಯೆ ಎಷ್ಟು ?

ಆ) ೧೯೭೮–೭೯ ರಿಂದ ೧೯೮೨–೮೩ರವರೆಗೆ ಜನತಾ ಮತ್ತು ಹುಡ್ಕೋ ಮನೆಗಳನ್ನು ತೆಗೆದು ಕೊಂಡವರ ಸಂಖ್ಯೆ ಎಷ್ಟು ?

ಇ) ಆಯಾ ಗ್ರಾಮಗಳಲ್ಲಿಯ ಮನೆಗಳಲ್ಲಿಯ ಮನೆಗಳು ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ ಮತ್ತು ಮನೆಗಳು ಪೂರ್ಣಗೊಂಡು ವಾಸಕ್ಕೆ ಅನುಕೂಲವಾಗಿರುವ ಮನೆಗಳ ವಿವರಗಳನ್ನು ತಿಳಿಸುವುದು?

ಈ) ಈ ಮನೆಗಳನ್ನು ಕಟ್ಟುವುದರಲ್ಲಿ ದುರ್ವ್ಯವಹಾರಗಳ ಪ್ರಕರಣಗಳೇನಾದರೂ ನಡೆದಿದೆಯೇ ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವರೇ ?

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು).—

ಅ)

	ಜನತಾ	ಹುಡ್ಕೋ	ಇತರೆ	ಒಟ್ಟು
ಸೇಡಂ	೮೩೪	೧೧೩೮	೪೧೯	೨೬೧೧
ಚಿತ್ತಾಪುರ	೧೬	೨೧೪	೪೨	೩೧೬
ಒಟ್ಟು	೪೫೦	೧೩೫೬	೯೦೧	೩೧೦೭

ಆ) ಸೇಡಂ

೧೯೭೮–೭೯	೬೪	೩೫೫	೨೭೨	೬೯೫
೧೯೭೯–೮೦	೨೨೫	೭೫	೧೦೫	೪೦೫
೧೯೮೦–೮೧	—	೧೪೫	೧೯೪	೩೭೯
೧೯೮೧–೮೨	—	೨೫೦	೪೭೧	೭೨೧
೧೯೮೨–೮೩	—	೨೭೩	೧೪೪	೪೨೧
ಒಟ್ಟು	೨೯೩	೧೧೩೪	೧೧೯೦	೨೬೨೧